ತನ್ನ ಮಾರ್ಗ ಅಥವಾ ವಿಧಾನ ಹೇಗೆ 'ಒಣ'ವೆನಿಸುವುದು? ಅವನ ಆತ್ಮ, ಬ್ರಹ್ಮ, ಸತ್ಯ ಎಂಬುದು ನಿರಂತರ ಸೌಂದರ್ಯ, ಮಾಧುರ್ಯ, ಪ್ರೀತಿಗಳಿಂದ ತುಂಬಿ ತುಳುಕಾಡುವುದು. ಭಕ್ತರು ಕಾಣುವ ಚಿನ್ಮಯ, ಸುಂದರ ಭಗವಂತನನ್ನೇ ಜ್ಞಾನಿಯು ಆತ್ಮನಾಗಿ ಕಾಣುತ್ತಾನೆ, ಅದಕ್ಕಿಂತ ಬೇರೆಯದಾದ ಸತ್ಯವನ್ನಲ್ಲ.

### ಮನೋವೈಜ್ಞಾನಿಕ ಪ್ರಕ್ರಿಯೆ

ಜ್ಞಾನಮಾರ್ಗವು ಆಧ್ಯಾತ್ಮಿಕ ಸಾಧನೆಯ ಒಂದು ಪ್ರಮುಖ ಮಾರ್ಗವೆಂದು ಪರಿಗಣಿಸಲು ಅದರ ಮನೋವೈಜ್ಞಾನಿಕ ಪ್ರಕ್ರಿಯೆ ಕೂಡ ಕಾರಣವಾಗಿದೆ. ವೇದಕಾಲದ ಋಷಿಗಳಿಂದ ಆರಂಭಿಸಿ, ಆಧುನಿಕ ಯುಗದ ಆಧ್ಯಾತ್ಮಿಕ ಮಹಾವ್ಯಕ್ತಿಗಳವರೆಗೆ ಪ್ರತಿಯೊಬ್ಬರೂ ಹೊಂದಿರುವ ಏಕಾಭಿಪ್ರಾಯವಿದು: ಆಧ್ಯಾತ್ಮಿಕ ಪ್ರಗತಿಗೆ ಮಾನಸಿಕ ಪರಿಶುದ್ಧತೆ ಅತ್ಯಗತ್ಯ. ಈ ಕಾರಣದಿಂದ ಬಾಲ್ಯದಿಂದಲೇ ಶೀಲ, ಚಾರಿತ್ರ್ಯ, ಪರಿಶುದ್ಧತೆಗಳಿಗೆ ಹೆಚ್ಚಿನ ಮಹತ್ವ ನೀಡಬೇಕು. ಕಾಮ, ಕ್ರೋಧಾದಿ ಭಾವನೆಗಳು, ಸ್ವಾರ್ಥ, ಕ್ರೌರ್ಯವೇ ಮೊದಲಾದ ದುಷ್ಟವಿಚಾರಗಳು ವ್ಯಕ್ತಿಯನ್ನು ಪತನದತ್ತ ಒಯ್ಯುವುವು. ಇವುಗಳಿಂದ ದೂರವಾಗದೆ ಆಧ್ಯಾತ್ಮಿಕ ಮುನ್ನಡೆ ಅಸಾಧ್ಯವೆಂದೇ ಭಾರತೀಯ ಆಧ್ಯಾತ್ಮಿಕ ಪರಂಪರೆ ಸಾರುತ್ತದೆ. ದೈವೀ ಭಾವನೆಗಳಿಗೆ ವಿರುದ್ಧವಾದ, ಆಧ್ಯಾತ್ಮಿಕ ಜೀವನಕ್ಕೆ ಮಾರಕವಾದ ದುರ್ಗುಣಗಳನ್ನು ದೂರಮಾಡಲು ಅತ್ಯಂತ ಪ್ರಬಲವಾದ ಕ್ರಮವೇ ವಿಚಾರ ಮಾರ್ಗ. ಜೀವನ, ಜಗತ್ತು, ವಿಶ್ವನಿಯಮ, ಪ್ರಕೃತಿ ಇವುಗಳ ಹಿಂದಿರುವ ಶಕ್ತಿಯೇನು, ನಮ್ಮ ಬದುಕಿನ ಅರ್ಥ ಹಾಗೂ ಉದ್ದೇಶವೇನು, ಭಗವಂತನ ಅಸ್ತಿತ್ವ, ಸತ್ಯ ಹಾಗೂ ಧರ್ಮ ಇವುಗಳ ನಿಜವಾದ ಅರ್ಥವೇನು – ಈ ವಿಷಯಗಳನ್ನು ಖಚಿತವಾಗಿ ತಿಳಿದಿದ್ದರಲ್ಲವೇ ನಮ್ಮ ನಡೆನುಡಿ, ತಿಳುವಳಿಕೆ ಹಾಗೂ ಸ್ವಭಾವಗಳನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಬಹುದು? ಈ ಅರ್ಥದಲ್ಲಿ ಸತ್ಯದೆಡೆಗೆ ನಮ್ಮನ್ನು ಕರೆದೊಯ್ಯುವ ಒಂದೊಂದು ಹೆಜ್ಜೆಯೂ ದಿವ್ಯ; ಒಂದೊಂದು ಕ್ಷಣವೂ ಭವ್ಯ.

ನಮ್ಮ ನೈಜ ಸ್ವಭಾವವನ್ನು ಅರಿತರೆ ನಮ್ಮ ಸ್ವಭಾವವೇ ಮಾರ್ಪಡುವುದು. ನಾವು ದಿವ್ಯಾತ್ಮರು, ನಾವು ಪರಮಾತ್ಮನ ಅಂಶವೇ ಆಗಿದ್ದೇವೆ; ಮೂಲತಃ ನಾವು ಪರಿಶುದ್ಧರು, ಹುಟ್ಟು–ಸಾವುಗಳಿಲ್ಲದ ಶಾಶ್ವತ ಆತ್ಮನೇ ನಾವಾಗಿರುವೆವು – ಎಂಬ ಸತ್ಯವನ್ನು ನಾವು ಶಾಸ್ತ್ರಗಳ ಆಧಾರದಿಂದಲೂ, ಸಾಧು–ಸಂತರ ವಾಣಿಗಳಿಂದಲೂ ಅರಿತು, ಈ ಮಾತುಗಳ ಅಂತರಾರ್ಥವನ್ನು ಖಚಿತವಾಗಿ ಮನಗಾಣಬೇಕು. ಈ ಭಾವನೆಗಳನ್ನು ನಾವು ಚಿಂತಿಸಿದಷ್ಟೂ, ಅವುಗಳ ಗುಣ ನಮ್ಮ ಮನಸ್ಸನ್ನು ತುಂಬಿಕೊಳ್ಳುವುದು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ''ನೀವೆಲ್ಲ ಭಗವಂತನ ಮಕ್ಕಳು. ಅಮೃತಾನಂದದಲ್ಲಿ ಭಾಗಿಗಳು. ಪರಿಶುದ್ಧಾತ್ಮರು ನೀವು, ಪರಿಪೂರ್ಣರು ನೀವು. ನೀವೆಲ್ಲರೂ ಜಗದ ಪವಿತ್ರಾತ್ಮರು. ಪಾಪಿಗಳು ಎಂದು ಮಾನವರನ್ನು ಕರೆಯುವುದೇ ಘೋರ ಪಾತಕ, ಮಾನವ ಸ್ವಭಾವಕ್ಕೆ ಬಗೆಯುವ ಮಹಾ ದ್ರೋಹ. ಸಿಂಹಗಳೇ ಬನ್ನಿ. ನೀವು ಕುರಿಗಳು ಎಂಬ ಭ್ರಾಂತಿಯನ್ನು ಕೊಡಹಿ. ಅಮೃತಾತ್ಮರು ನೀವು, ಮುಕ್ತಾತ್ಮರು ನೀವು, ಆನಂದಮಯರು ನೀವು, ನಿತ್ಯಾತ್ಮರು ನೀವು.''
*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೧, ಪು.೧೩)*

ಇನ್ನೂ ಮುಂದುವರಿದು ಸ್ವಾಮೀಜಿ ಹೇಳುತ್ತಾರೆ, ''ನೀವು ಮುಕ್ತರೆಂದು ದೃಢವಾಗಿ ಸಾರಲು ಪ್ರಯತ್ನಪಟ್ಟರೆ, ಈ ಕ್ಷಣವೇ ನೀವು ಮುಕ್ತರು. ನೀವು ಬದ್ಧರೆಂದು ಹೇಳಿದರೆ ಬದ್ಧರಾಗಿಯೇ ಇರುವಿರಿ. ಇದನ್ನೇ ಅದ್ವೈತವು ಧೈರ್ಯದಿಂದ ಸಾರುವುದು.''
*(ಕೃತಿಶ್ರೇಣಿ, ಸಂ.೨, ಪು.೨೯೫)*

ಇದೇ ಮನೋವೈಜ್ಞಾನಿಕ ಕ್ರಿಯೆ. ಒಂದು ಕ್ಷಣವೇ ಆದರೂ ಸರಿ, 'ನಾನೇ ಆತ್ಮ' 'ನಾನೇ ಬ್ರಹ್ಮ' ಎಂದು ಯೋಚಿಸಿದರೂ ಸಾಕು; ಆ ಕ್ಷಣದ ಮಟ್ಟಿಗೆ ನಾವು ಅದೇ ಆಗುವೆವು. ಎಂಥ ದಿವ್ಯವಾದ ಸತ್ಯವಿದು! ನಾವು ಏನನ್ನೂ ಯೋಚಿಸುತ್ತೇವೋ ಅದೇ ಆಗುತ್ತೇವೆ ಎನ್ನುತ್ತಾರೆ. ನಿರಂತರ ನಾವು ನಮ್ಮ ದಿವ್ಯಸ್ವರೂಪವನ್ನೇ ಚಿಂತಿಸಿದರೆ ನಾವು ಇನ್ನೇನಾಗುವೆವು? ದಿವ್ಯತೆಯನ್ನೇ ಆವಾಹಿಸಿಕೊಂಡು, ಆತ್ಮನ ದಿವ್ಯತೆಯಲ್ಲಿ ಒಂದಾಗುವೆವಲ್ಲವೆ? ಈ ಅರ್ಥದಲ್ಲಿ, ಅರಿವಿನ ಹಾದಿಯಲ್ಲಿ ಸಾಗುವ ಸಾಧಕನ ಪ್ರತಿಯೊಂದು ಆಲೋಚನೆಯೂ ಮುಖ್ಯವಾಗುವುದು. ಮುಂಡಕೋಪನಿಷತ್ತಿನಲ್ಲಿ **'ಸ ಯೋ ಹ ವೈ ತತ್ ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ'** (ಯಾವನು ಆ ಪರಮ ಬ್ರಹ್ಮವನ್ನು ತಿಳಿದುಕೊಳ್ಳುವನೋ ಅವನು ಬ್ರಹ್ಮವೇ ಆಗುವನು) – ಎಂದಿರುವುದು ಇಂಥ ಒಂದು ಕ್ಷಣದ ಸಾಕ್ಷಾತ್ಕಾರವನ್ನಲ್ಲ; ಇಂಥ ಅಸಂಖ್ಯ ಕ್ಷಣಗಳ ಮೊತ್ತವಾದ, ಎಲ್ಲ ಅಜ್ಞಾನಗಳನ್ನು ಮೀರಿದ, ಪರಮ ಜ್ಞಾನದಿಂದ ಬರುವ ಸಾಕ್ಷಾತ್ಕಾರವನ್ನು ಕುರಿತು. ಅದನ್ನು ಹೊಂದಲು ಸಾಗಬೇಕಾಗಿರುವ ಮಾರ್ಗ ಎಷ್ಟು ದೂರ? ಹೇಳಬಲ್ಲವರಾರು? *

## ಓದುಗರ ಪತ್ರ

ಜೂನ್ ಸಂಚಿಕೆಯಲ್ಲಿ 'ಪಂಚಕೇದಾರ ಯಾತ್ರೆ'ಯ ಬಗ್ಗೆ ಪ್ರಕಟಿಸಿದ್ದೀರಿ. ಬಹಳ ಚೆನ್ನಾಗಿದೆ. ಸ್ವತಃ ನೋಡಿದ ಅನುಭವವಾಯಿತು. ತುಂಗನಾಥನ ದರ್ಶನವನ್ನು ಮಾಡಿಸಿದ್ದರೆ (ಫೋಟೋ ಮೂಲಕ) ಚೆನ್ನಾಗಿರುತ್ತಿತ್ತು. ಇದೇ ಸಂಚಿಕೆಯಲ್ಲಿ ಪ್ರಕಟವಾದ 'ವಿಠಲನ ಸಖ ನಾಮದೇವ' ಲೇಖನದಲ್ಲಿ ನಾಮದೇವನ ಜನನ ೧೨೭೦ರಲ್ಲಿ, ದೇಹತ್ಯಾಗ ೧೨೫೦ರಲ್ಲಿ ಎಂದು ತಿಳಿಸಿದ್ದೀರಿ. ಆಗ ಅವರಿಗೆ ಎಂಬತ್ತು ವರ್ಷ ವಯಸ್ಸು ಎಂದೂ ಸಹ ಬರೆದಿರುತ್ತೀರಿ. ಇದು ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಮುದ್ರಣ ದೋಷವೋ ಅಥವಾ ಬರೆದಿರುವ ದಿನಾಂಕವೇ ತಪ್ಪೋ, ತಿಳಿಯದಾಗಿದೆ.

– ಕೆ. ಗಾಯತ್ರಿ ಮಂಜುನಾಥ್, ಕುಣಿಗಲ್

(ನಾಮದೇವ ದೇಹ ತ್ಯಜಿಸಿದ್ದು **೧೩೫೦ರಲ್ಲಿ**. ಜೂನ್ ತಿಂಗಳ ಸಂಚಿಕೆಯಲ್ಲಿ ತಪ್ಪಾಗಿ ಮುದ್ರಿತವಾಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ.) –ಸಂ